# ಸಾಹಿತ್ಯದ ಮೇಲೆ ಮಾಧ್ಯಮಗಳ ಪ್ರಭಾವ

**ಶ್ರೀದೇವಿ ಪ. ದೊಡ್ಡಮನಿ**

ಕನ್ನಡ ಉಪನ್ಯಾಸಕರು, ಕೆ.ಎಲ್.ಇ ಸಂಸ್ಥೆಯ ಜಿ.ಎಚ್.ಮಹಾವಿದ್ಯಾಲಯ, ಹಾವೇರಿ.

DOI: https://doi.org/10.5281/zenodo.17255169

## ABSTRACT:

ಈ ಲೇಖನದಲ್ಲಿ ಸಾಹಿತ್ಯದ ಮೇಲೆ ಮಾಧ್ಯಮಗಳ ಪ್ರಭಾವವನ್ನು ವಿಶ್ಲೇಷಿಸಲಾಗಿದೆ. ಭಾಷೆ ಮತ್ತು ಸಾಹಿತ್ಯ ಮಾನವ ಸಂವಹನದ ಮೂಲಭೂತ ಸಾಧನಗಳಾಗಿದ್ದು, ಅವುಗಳ ಪ್ರಸಾರ ಮತ್ತು ವ್ಯಾಪಕತೆಗೆ ಮಾಧ್ಯಮಗಳು ಪ್ರಮುಖ ಪಾತ್ರವಹಿಸಿವೆ. ಮುದ್ರಣ ಮಾಧ್ಯಮದಿಂದ ಪ್ರಾರಂಭವಾದ ಈ ಪ್ರಕ್ರಿಯೆ, ರೇಡಿಯೋ, ದೂರದರ್ಶನ, ಸಿನಿಮಾ, ಇಂಟರ್‌ನೆಟ್, ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಹೊಸ ಆಯಾಮಗಳನ್ನು ಪಡೆದಿದೆ. ಮಾಧ್ಯಮಗಳು ಸಾಹಿತ್ಯವನ್ನು ಜನಪ್ರಿಯಗೊಳಿಸುವುದರ ಜೊತೆಗೆ ಶಿಕ್ಷಣ, ಮನರಂಜನೆ, ಪ್ರಚಾರ ಮತ್ತು ಸಮಾಜ ಪರಿವರ್ತನೆಯ ಸಾಧನಗಳಾಗಿವೆ. ಸಾಹಿತ್ಯದ ಪ್ರಚಾರಪ್ರಸಾರ, ಕಲೆ ಸಂಸ್ಕೃತಿಯ ಉಳಿವು ಮತ್ತು ನವ್ಯ ಸಾಹಿತ್ಯ ಸೃಜನಶೀಲತೆಗೆ ಮಾಧ್ಯಮಗಳು ಆಧಾರವಾಗಿವೆ. ತಂತ್ರಜ್ಞಾನಾಧಾರಿತ ಡಿಜಿಟಲ್ ಯುಗದಲ್ಲಿ ಸಾಹಿತ್ಯ ಎಲ್ಲರಿಗೂ ಸುಲಭವಾಗಿ ಲಭ್ಯವಾಗುತ್ತಿರುವುದು ಇದರ ವಿಶೇಷತೆ. ಹೀಗಾಗಿ, ಪಾರಂಪರಿಕ ಮಾಧ್ಯಮಗಳ ನೆಲೆಯ ಮೇಲೆ ಆಧುನಿಕ ಮಾಧ್ಯಮಗಳು ಸಾಹಿತ್ಯದ ವೈವಿಧ್ಯತೆಯನ್ನು ಹೆಚ್ಚಿಸಿ, ನವಪೀಳಿಗೆಯ ಸೃಜನಾತ್ಮಕ ಚಿಂತನೆಗೆ ದಾರಿ ಮಾಡಿಕೊಟ್ಟಿವೆ ಎಂಬುದು ಈ ಲೇಖನದ ಸಾರವಾಗಿದೆ.

## KEYWORDS:

ಸಾಹಿತ್ಯ, ಭಾಷೆ, ಪ್ರಸಾರ ಮಾಧ್ಯಮ, ಡಿಜಿಟಲ್ ಮಾಧ್ಯಮ, ಇಂಟರ್‌ನೆಟ್, ಸಾಮಾಜಿಕ ಜಾಲತಾಣ, ಮನರಂಜನೆ.

**ಪ್ರಸ್ತಾವನೆ:**

ಭಾಷೆ ಎಂಬ ಜ್ಯೋತಿ ಬೆಳಗದೆ ಇದ್ದರೆ ಮೂರು ಲೋಕಗಳೆಲ್ಲ (ಅಜ್ಞಾನವೆಂಬ) ಕತ್ತಲೆಯಲ್ಲಿ ಮುಳುಗಿ ಹೋಗುತ್ತಿದ್ದವು ಎಂಬ ದಂಡಿಯ ಉಕ್ತಿ ಇಂದು ಸತ್ಯವೆನಿಸಿದೆ. ಭಾಷೆ ಮನುಷ್ಯ ಮನುಷ್ಯರನ್ನು ತೀರ ಹತ್ತಿರಕ್ಕೆ ತಂದಿದೆ. ಗುಂಪು ಜೀವಿಯಾಗಿದ್ದವನನ್ನು ಸಮಾಜಜೀವಿಯನ್ನಾಗಿಸಿದೆ. ಅವನ ಮಾನಸಿಕ, ಶಾರೀರಿಕ, ಸಾಮಾಜಿಕ ಅವಶ್ಯಕತೆಗಳ ಪೂರೈಕೆಗಾಗಿ ಭಾವನೆಯ ಎಳೆ ಎಳೆಗಳನ್ನು ಅವನು ಭಾಷಾ ಮಾಧ್ಯಮದ ಮೂಲಕ ಸಾಧ್ಯಮಾಡಿಕೊಂಡಿದ್ದಾನೆ.

ಭಾಷೆ ಎಂದರೆ ನಮ್ಮ ಆಲೋಚನೆಗಳನ್ನು ಅಭಿವ್ಯಕ್ತಿಸುವ ಒಂದು ಸಾಧನವಾಗಿದೆ. ಸಾಹಿತ್ಯವು ಭಾಷೆಯನ್ನು ಬಳಸಿ ಸೃಷ್ಟಿಸುವ ಕಲಾತ್ಮಕ ಕೃತಿಗಳ ಸಮೂಹವಾಗಿದೆ. ಭಾಷೆ ಸಾಹಿತ್ಯದ ಮೂಲಾಧಾರವಾಗಿದೆ. ಸಾಹಿತ್ಯವು ಭಾಷೆಯನ್ನು ಬಳಸಿ ತನ್ನ ಕಥೆ, ಕಾವ್ಯ ಮತ್ತು ನಾಟಕ ರೂಪಗಳಲ್ಲಿ ಆಲೋಚನೆಗಳನ್ನು ವ್ಯಕ್ತಪಡಿಸುತ್ತದೆ. ಸಾಹಿತ್ಯ ಮತ್ತು ಭಾಷೆ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿವೆ.

ಪ್ರಸ್ತುತ ದಿನಗಳಲ್ಲಿ ಸಾಹಿತ್ಯಕ್ಕೆ ಮಾಧ್ಯಮಗಳ ಪ್ರಭಾವವು ಅಗತ್ಯವಾಗಿದೆ. ಸಾಹಿತ್ಯದ ವಿಭಿನ್ನ ರೂಪಗಳು ಪ್ರತಿಯೊಬ್ಬರ ಅರಿವಿನ ವಿಸ್ತರಣೆಗೆ ಭಾವದ ಬುನಾದಿ ಹಾಕುವ ಕೆಲಸವನ್ನು ಇಂದಿನ ಮಾಧ್ಯಮಗಳು ಮಾಡುತ್ತವೆ. ಅಷ್ಟೇ ಅಲ್ಲ, ಯುವ ಸಮುದಾಯಕ್ಕೆ ಜೀವನ ಮೌಲ್ಯಗಳನ್ನು ಪರಿಚಯಿಸಲು ಹಾಸುಹೊಕ್ಕಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಪ್ರತಿಯೊಬ್ಬರು ಸಾಹಿತ್ಯದ ಕಂಪನ್ನು ಸಂಸ್ಕೃತಿಯ ಇಂಪನ್ನು ಮೈಮನ ತುಂಬಿಕೊಳ್ಳಲು ಮುಕ್ತವಾಗಿ ಕಲಿಯುವ ಅವಕಾಶವನ್ನು ಎಲ್ಲ ಜ್ಞಾನದ ಶಾಖೆಗಳನ್ನು ಪರಿಚಯಿಸುವ ಸಾಮರ್ಥ್ಯವನ್ನು ಮಾಧ್ಯಮಗಳು ವ್ಯಾಪಿಸಿವೆ.

**ಸಾಹಿತ್ಯದಲ್ಲಿ ಮಾಧ್ಯಮ ಪಾತ್ರದ ಉಗಮ:**

'ಮಾಧ್ಯಮ' ಎಂಬ ಪದವನ್ನು ಸುಮಾರು 1920ರ ದಶಕದಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಎರಡನೆಯ ಮಹಾಯುದ್ಧದ ನಂತರ ರೇಡಿಯೋ, ದೂರದರ್ಶನ ಹಾಗೂ ವಿಡಿಯೋವನ್ನು ಪರಿಚಯಿಸುವವರೆಗೂ ಸಮೂಹ ಮಾಧ್ಯಮದ ಪರಿಕಲ್ಪನೆ ಸಾಮಾನ್ಯವಾಗಿ ಮುದ್ರಣ ಮಾಧ್ಯಮಕ್ಕೆ ಮಾತ್ರ ಸೀಮಿತವಾಗಿತ್ತು. 1950ರ ನಂತರ ಸಮೂಹ ಮಾಧ್ಯಮಗಳ ಪರಿಕಲ್ಪನೆಯೇ ಬದಲಾಯಿತು. ಸಮೂಹ ಮಾಧ್ಯಮಗಳ ವಿಕಾಸವನ್ನು ಕಾಲಾನುಕ್ರಮದಲ್ಲಿ ನೋಡುವುದಾದರೆ 15ನೆಯ ಶತಮಾನದ ಕೊನೆಯ ಕಾಲಾವಧಿಯಿಂದ 'ಪುಸ್ತಕಗಳು, ಕರಪತ್ರಗಳು, ಪತ್ರಿಕೆಗಳು, ನಿಯತಕಾಲಿಕೆಗಳು, ಭಿತ್ತಿಪತ್ರಗಳು' ಮೊದಲಾದವುಗಳು ಪ್ರಮುಖವಾಗಿದ್ದವು. 19ನೆಯ ಶತಮಾನದ ಕೊನೆಯ ಕಾಲಾವಧಿಯಿಂದ 'ಧ್ವನಿ ಮುದ್ರಣಗಳಾದ ಗ್ರಾಮಫೋನ್, ಮ್ಯಾಗ್ನೆಟಿಕ್

ಟೇಪ್‌ಗಳು, ಕ್ಯಾಸೆಟ್, ಸಿಡಿ, ಡಿವಿಡಿ ಮೊದಲಾದವುಗಳು ಸಮೂಹ ಮಾಧ್ಯಮ ಕ್ಷೇತ್ರವನ್ನು ಪ್ರವೇಶ ಮಾಡಿದವು. 19ನೆಯ ಶತಮಾನದಲ್ಲಿ ಸಿನಿಮಾ, 1910ರಲ್ಲಿ ರೇಡಿಯೋ, 1950ರಲ್ಲಿ ದೂರದರ್ಶನ, 1990ರಲ್ಲಿ ಇಂಟರ್‌ನೆಟ್, 2000ರಲ್ಲಿ ಮೊಬೈಲ್ ಫೋನ್‌ಗಳು ಇವುಗಳಲ್ಲಿ ರೇಡಿಯೋ ಮತ್ತು ದೂರದರ್ಶನಗಳನ್ನು ಪ್ರಸಾರ ಮಾಧ್ಯಮಗಳೆಂದು ಕರೆದರೆ ಇಂಟರ್‌ನೆಟ್, ಮೊಬೈಲ್ ಫೋನ್‌ಗಳನ್ನು ಡಿಜಿಟಲ್ ಮಾಧ್ಯಮವೆಂದು ಕರೆಯಲಾಗುತ್ತಿದೆ.

ಡಿಜಿಟಲ್ ಮಾಧ್ಯಮಗಳಿಂದ ಸಾಹಿತ್ಯದ ವ್ಯಾಪ್ತಿ ಇನ್ನೂ ಹೆಚ್ಚಾಗುತ್ತಲೇ ಇದೆ. ಸಾಹಿತ್ಯದ ಕ್ಲಿಷ್ಟತೆಯ ಪ್ರಮಾಣ ಇನ್ನೂ ಸರಳೀಕೃತಗೊಂಡಿದೆ. ಇದರಿಂದ ಸಾಹಿತ್ಯ ಎಲ್ಲರ ಕೈಗೆ ಸಿಗುವಂತಾಗಿದೆ. ಇಂದು ನಾವು ಬಳಸುವ ಪ್ರಸಾರ ಮಾಧ್ಯಮಗಳಾದ ಪತ್ರಿಕೆಗಳು ಮತ್ತು ಪುಸ್ತಕಗಳು ಹಾಗೂ ಇತರ ಸಮೂಹ ಮಾಧ್ಯಮಗಳಾದ ರೇಡಿಯೋ, ಸಿನಿಮಾ ದೂರದರ್ಶಕಗಳೊಂದಿಗೆ, ನಾಟಕ, ಭಾಷಣ, ಶಿಲ್ಪ, ಚಿತ್ರರೂಪಕ, ಗಮಕ, ನೃತ್ಯ ಸಂಗೀತ, ಯಕ್ಷಗಾನ, ಬಯಲಾಟ, ಜನಪದ ಕಲೆಗಳು (ಭಜನೆ ಮೇಳ, ಕೀರ್ತನೆಗಳು, ಪ್ರದರ್ಶನಗಳು) ಮೊದಲಾದವುಗಳು ಪ್ರಾಚೀನ ಕಾಲದಿಂದ ಇಂದಿಗೂ ಸಮೂಹ ಮಾಧ್ಯಮದ ಅಂಗಗಳಾಗಿ ಉಳಿದುಕೊಂಡು ಬಂದಿವೆ. ಇವುಗಳನ್ನು ಹೊರತುಪಡಿಸಿ 21ನೆಯ ಶತಮಾನದ ತಂತ್ರಜ್ಞಾನ ಯುಗದಲ್ಲಿ ಸಮೂಹ ಮಾಧ್ಯಮಗಳ ಕ್ಷೇತ್ರಗಳಲ್ಲಿ ಡಿಜಿಟಲ್ ಮಾಧ್ಯಮಗಳಾದ ಇಂಟರ್‌ನೆಟ್ ಮತ್ತು ಮೊಬೈಲ್ ಈ ಎರಡನ್ನೂ ಒಳಗೊಂಡು "ಇಮೇಲ್, ಸಾಮಾಜಿಕ ಮಾಧ್ಯಮ ಸೈಟ್‌ಗಳು, ವೆಬ್‌ಸೈಟ್‌ಗಳು ಮತ್ತು ಇಂಟರ್‌ನೆಟ್ ಆಧಾರಿತ ರೇಡಿಯೋ, ದೂರದರ್ಶನದಂತಹ ಸೇವೆಗಳನ್ನು ಒಳಗೊಂಡು ಸಾಹಿತ್ಯಿಕ ವಿಷಯಗಳು ಸಮೂಹ ಮಾಧ್ಯಮಗಳ ಮೂಲಕ ಜನರನ್ನು ತಲುಪುತ್ತಿವೆ. ಆನ್‌ಲೈನ್‌ನಲ್ಲಿ ಕ್ಯೂಆರ್ ಕೋಡ್‌ಗಳನ್ನು ನೀಡುವುದರ ಮೂಲಕ ಇಂದು ವೆಬ್‌ನಲ್ಲಿ (ಅಂತರ್ಜಾಲ) ಇತರ ಅನೇಕ ಮಾಧ್ಯಮಗಳ ಕಿಂಡಿಗಳು ತೆರೆದುಕೊಂಡಿವೆ.

**ಸಾಹಿತ್ಯದಲ್ಲಿ ಮಾಧ್ಯಮಗಳ ಪ್ರಭೇದಗಳು:**

ಇಂದು ಸಾಹಿತ್ಯ ಕ್ಷೇತ್ರದಲ್ಲಿ ಮಾಧ್ಯಮಗಳ ವ್ಯಾಪ್ತಿ ವಿಶಾಲವಾಗಿರುವುದರಿಂದ ಅಧ್ಯಯನಕ್ಕಾಗಿ ಹಲವು ರೀತಿಯಲ್ಲಿ ವಿಂಗಡಿಸಬಹುದು. ಹಲವರು ಶಬ್ದ ಮಾಧ್ಯಮ, ದೃಶ್ಯ ಮಾಧ್ಯಮ, ಅಕ್ಷರ ಮಾಧ್ಯಮ, ಶ್ರವ್ಯ ಮಾಧ್ಯಮ, ದೃಶ್ಯಶ್ರವ್ಯ ಮಾಧ್ಯಮಗಳಾಗಿ ವಿಂಗಡಿಸಿದ್ದಾರೆ. ಆದರೆ ಇವುಗಳನ್ನು:

1. ಪಾರಂಪರಿಕ ಸಾಹಿತ್ಯ ಸಮೂಹ ಮಾಧ್ಯಮಗಳು
2. ಆಧುನಿಕ ಸಾಹಿತ್ಯ ಸಮೂಹ ಮಾಧ್ಯಮಗಳು ಎಂದು ಪ್ರಮುಖವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು.

**ಪಾರಂಪರಿಕ ಸಾಹಿತ್ಯ ಸಮೂಹ ಮಾಧ್ಯಮಗಳು:**

ಶಾಸನಗಳು, ಜನಪದ ಕಲೆಗಳು, ನೃತ್ಯ, ನಾಟಕ, ಪ್ರಾಚೀನ ಗ್ರಂಥಗಳು, ಕಾವ್ಯಗಳು ಮುಂತಾದವುಗಳು. ಈ ಪಾರಂಪರಿಕ ಸಾಹಿತ್ಯ ಸಮೂಹ ಮಾಧ್ಯಮದಲ್ಲಿ ಮಾಧ್ಯಮಗಳು ಏಕಮುಖಿಯಾಗಿರುತ್ತವೆ. ಓದುಗ, ಕೇಳುಗ, ನೋಡುಗ ಹೀಗೆ ಕೂಡಲೇ ತನ್ನ ಪ್ರತಿಕ್ರಿಯೆಯನ್ನು ತಿಳಿಸುವ ಮತ್ತು ಪ್ರಶ್ನೆ ಕೇಳುವ ಅಥವಾ ಅಗತ್ಯವಿದ್ದರೆ ಸ್ಪಷ್ಟನೆ ಕೇಳುವ ಅವಕಾಶ ಇಲ್ಲಿ ಕಡಿಮೆ. ಕೆಲವು ಸಂದರ್ಭಗಳಲ್ಲಿ ಅಲ್ಪ ಸ್ವಲ್ಪ ಪ್ರತಿಕ್ರಿಯೆ ಸಿಗಬಹುದು. ಜನಪದ ಸಾಹಿತ್ಯ ಕಲೆಗಳಲ್ಲಿ ನಮ್ಮ ಸಂಸ್ಕೃತಿಯ ಮೂಲ ಬೇರುಗಳನ್ನು ಕಾಣಬಹುದು. ಹಾಡು, ಗಾದೆ, ಲಾವಣಿ, ಒಗಟು, ಕಥೆ, ಕುಣಿತಗಳ ಮೂಲಕ ಜನಪದರು ದಿನನಿತ್ಯದ ಸುಖದುಃಖಗಳನ್ನು ವ್ಯಕ್ತಪಡಿಸುವಲ್ಲಿ ಸಾಹಿತ್ಯವನ್ನು ತಮ್ಮ ಮಾಧ್ಯಮವನ್ನಾಗಿ ಬಳಸಿಕೊಂಡರು.

**ಆಧುನಿಕ ಸಾಹಿತ್ಯ ಸಮೂಹ ಮಾಧ್ಯಮಗಳು:**

ರೇಡಿಯೋ, ದೂರದರ್ಶನ, ಚಲನಚಿತ್ರ, ಗಣಕಯಂತ್ರ, ಮೊಬೈಲ್, ಅಂತರ್ಜಾಲ, ವಾಟ್ಸಾಪ್, ಟೆಲಿಗ್ರಾಮ್, ಇಮೇಲ್, ಬ್ಲಾಗ್, ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಲಿಂಕ್ಡ್ ಇನ್, ಯೂಟ್ಯೂಬ್ ಮುಂತಾದವುಗಳು.

**ಸಾಹಿತ್ಯಿಕ ಕ್ಷೇತ್ರದಲ್ಲಿ ಮಾಧ್ಯಮಗಳ ಉಪಯೋಗಗಳು:**

ಪ್ರಯೋಜನಗಳು ಇಲ್ಲದೆ, ಮನುಷ್ಯನು ಯಾವ ಕಾರ್ಯದಲ್ಲಿಯೂ ತೊಡಗುವುದಿಲ್ಲ. ಸಾಮಾನ್ಯವಾಗಿ, ಸಮೂಹ ಮಾಧ್ಯಮಗಳಿಂದ ವಿಷಯಗಳ ಸಂಗ್ರಹಣೆ, ಸುದ್ದಿ, ಮನರಂಜನೆ ಮಾತ್ರ ತಿಳಿಸುವುದು ಎಂಬ ತಿಳುವಳಿಕೆ ಸಾಮಾನ್ಯವಾಗಿತ್ತು. ಆದರೆ, ಇದರಾಚೆಗೂ ಮಾಧ್ಯಮಗಳು ಅಪಾರವಾದ ಕೊಡುಗೆಯನ್ನು ಸಾಹಿತ್ಯಕ್ಕೆ ನೀಡಿವೆ.

**ಶಿಕ್ಷಣ:** ಮಾಧ್ಯಮಗಳಿಲ್ಲದೇ ಇಂದಿನ ಶಿಕ್ಷಣವಿಲ್ಲ ಮತ್ತು ಸಾಹಿತ್ಯವಿಲ್ಲ. ಮಾಧ್ಯಮಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಅಂಶಗಳನ್ನು ವಿಶ್ಲೇಷಣಾತ್ಮಕವಾಗಿ ತಿಳಿಸುತ್ತವೆ. ಸಾಹಿತ್ಯಾಸಕ್ತರ ಅಂಗೈಗೆ ಮಾಹಿತಿಯನ್ನು ಒದಗಿಸುತ್ತಿರುವ ಇಂದಿನ ಯುಗವನ್ನು 'ಮಾಹಿತಿ ತಂತ್ರಜ್ಞಾನ ಯುಗ'ವೆಂದು ಕರೆಯಲು ಕಾರಣ.

**ಪ್ರಚಾರ:** ಸಾಹಿತ್ಯವನ್ನು ಪ್ರಚಾರ ಮಾಡುವಲ್ಲಿ ಅತೀ ಸುಲಭವಾದ ಮಾರ್ಗವೆಂದರೆ, ಮಾಧ್ಯಮಗಳು ಕ್ಷಣಾರ್ಧದಲ್ಲಿ ಸಾಹಿತಿಗಳ ಬಗ್ಗೆ, ಸಾಹಿತ್ಯ ಕೃತಿಗಳ ಬಗ್ಗೆ ಸಂಪೂರ್ಣವಾಗಿ ಶ್ರವ್ಯ ಹಾಗೂ ದೃಕ್ ಮಾಧ್ಯಮಗಳ ಮೂಲಕ ಪ್ರಚಾರಗೊಳ್ಳುತ್ತವೆ. ಕಲಾ ಪ್ರಕಾರಗಳಲ್ಲಿಯಂತೂ ಇನ್ನೂ ಗಮನಾರ್ಹವಾಗಿ ಪ್ರಚಾರಗೊಳ್ಳಲು ಸಾಧ್ಯವಾಗುತ್ತದೆ.

**ಮನರಂಜನೆ:** ಕ್ಲಿಷ್ಟತೆಯಿಂದ ಸರಳತೆಯೆಡೆಗೆ ಸಾಹಿತ್ಯವನ್ನು ಅಧ್ಯಯನ ಮಾಡಲು ಮಾಧ್ಯಮಗಳು ಪ್ರಮುಖ ಸ್ಥಾನವನ್ನು ವಹಿಸುತ್ತವೆ. ಪೂರ್ವದ ಹಳಗನ್ನಡ, ಹಳಗನ್ನಡ ಕಾವ್ಯಗಳನ್ನು ರಸಾಸ್ವಾದವಾಗಿ, ವಾಚನ ಮಾಡುವ ವಿಧಾನವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಮನರಂಜನೆಗಳ ಮುಖಾಂತರ ಸಾಹಿತ್ಯದ ಪ್ರಕಾರಗಳನ್ನು ಮತ್ತು ಸಾಂಸ್ಕೃತಿಕ ಕಲೆಗಳನ್ನು ಅರ್ಥೈಸಿಕೊಂಡು ಆಸ್ವಾದಿಸಿಕೊಳ್ಳಲು ಸಾಧ್ಯವಾಗುತ್ತದೆ. ಮುಂದಿನ ಪೀಳಿಗೆಗೆ ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಮನರಂಜನಾ ಅಸ್ತ್ರದಿಂದ ಕೊಂಡೊಯ್ಯುತ್ತದೆ.

**ಸಮಾಜಪರಿವರ್ತನಾ ಕಾರ್ಯ:** ಸಾಹಿತ್ಯದಲ್ಲಿ ಅಡಕವಾಗಿರುವ ಸಮಾಜ ಪರಿವರ್ತನಾ ಕಾರ್ಯವನ್ನು ಮಾಧ್ಯಮಗಳು ಸರಳವಾಗಿ ಮುಗಿಸಿಬಿಡುತ್ತವೆ. ಚಿಂತಕರು, ಅನುಭಾವಿಗಳು, ಸಾಧುಗಳು, ಸಂತರು, ವಚನಕಾರರು, ದಾಸರು, ಕೀರ್ತನೆಗಾರರು ನೀಡಿದ ಅಪಾರ ಜ್ಞಾನಾಮೃತವನ್ನು ಮಾಧ್ಯಮಗಳ ಮೂಲಕ ಪ್ರಸಾರಪಡಿಸುವುದಷ್ಟೇ ಅಲ್ಲದೇ, ಆಯಾ ವಿಷಯಗಳ ಬಗ್ಗೆ, ಚರ್ಚೆ, ಸಂವಾದ, ಗೋಷ್ಠಿಗಳು, ಚಿಂತನೆಗಳು, ಅಭಿನಯಗಳ ರೂಪದಲ್ಲಿ ಮತ್ತೊಮ್ಮೆ ಅವುಗಳನ್ನು ಅಧ್ಯಯನ ಮಾಡಬಹುದಾಗಿದೆ.

ನವಬರಹಗಾರರಿಗೆ ಮಾಧ್ಯಮಗಳಿಲ್ಲದೇ ತಮ್ಮ ಸಾಹಿತ್ಯದ ಅಭಿವ್ಯಕ್ತಿ ಸಾಧ್ಯವಾಗುವುದಿಲ್ಲ. ಪೇಪರ್ ಮತ್ತು ಪೆನ್ನಿನ ಸಾಹಿತ್ಯವು ಇಂದು ರೂಪಾಂತರಗೊಂಡು ಮಾಧ್ಯಮದ ಅಡಿಯಲ್ಲಿ ವಿಜೃಂಭಿಸಬೇಕಾಗಿದೆ. ಸಾಹಿತ್ಯವನ್ನು ಅವಲೋಕಿಸಬೇಕಾದರೆ, ''ಏಕಾಂತ'' ಮತ್ತು ''ಲೋಕಾಂತ'' ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಒಂದು ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಏಕಾಂಗಿಯಾಗಿ ಸೃಜಿಸುವ ಕಲೆಯನ್ನು ಒಳಗೊಂಡಿದ್ದು ಆದರೆ ಇಂದು ಬಹುತ್ವದ ಮಾದರಿಯನ್ನು ಹೊಂದಿರುವ ಮಾಧ್ಯಮವನ್ನು ಅವಲೋಕಿಸಿ ಲೋಕಾಂತವಾಗಿ ವಿವಿಧ ಕಲೆಗಳನ್ನು, ಕ್ಷೇತ್ರಗಳನ್ನು ಆಯ್ಕೆ ಮಾಡಿ ಮಿತಿಯಿಲ್ಲದ ಗಡಿಯನ್ನು ದಾಟಿ, ಸಾಹಿತ್ಯಲೋಕವನ್ನು ಕಟ್ಟಬೇಕಾಗಿದೆ. ಇನ್ನೂ ವಿವರಿಸಿ ಹೇಳಬೇಕಾದರೆ, ಲಿಂಗಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ ಮುಂತಾದವುಗಳನ್ನು ನೋಡುವುದರ ಆಚೆ ಮಾಧ್ಯಮಗಳ ಲೋಕವನ್ನು ನೋಡಬೇಕಾಗಿದೆ.

ದ.ರಾ. ಬೇಂದ್ರೆಯವರ ''ಪ್ರಾಣದ ಕೆಚ್ಚು ಕೆತ್ತಿ ರಚಿಸಿದ್ದು'' ಎಂಬ ಹೇಳಿಕೆಯನ್ನು ಗಮನಿಸಿದಾಗ, ಹೊರಗಿನ ಹತಾರಗಳನ್ನು ಬಿಟ್ಟು ಪ್ರಾಣವನ್ನು ಇಟ್ಟು ಬರೆಯುವುದು ಅಥವಾ ನೋಡುವುದಾಗಿದೆ. ಇದು ಏಕಾಂತಕ್ಕೆ ಇರುವ ಕ್ಷೇತ್ರವಾಗಿದೆ. ಆದರೆ, ಇಂದಿನ ಆಧುನಿಕ ಯುಗದಲ್ಲಿ ಯೂಟ್ಯೂಬ್, ವಾಟ್ಸಾಪ್, ಫೇಸ್‌ಬುಕ್, ಟೆಲಿಗ್ರಾಮ್, ಬ್ಲಾಗ್‌ಗಳು ಏಕಾಂತದಿಂದ ಲೋಕಾಂತದೆಡೆಗೆ ಒಯ್ಯುವ ಮಾಧ್ಯಮಿಕ ಶಕ್ತಿಗಳಾಗಿವೆ.

ಮಾಧ್ಯಮಗಳಲ್ಲಿ ನಡೆಯುವ ಚರ್ಚೆ, ಸಂವಾದ, ಗೋಷ್ಠಿ, ವಿಚಾರಸಂಕಿರಣ,

ಕಾರ್ಯಾಗಾರಗಳು ಮುಂತಾದವುಗಳಲ್ಲಿ ಸಾಹಿತ್ಯದ ವಿಷಯಗಳನ್ನು ಹಂಚಿಕೊಳ್ಳುವುದರಿಂದ ವಿಷಯ ಗ್ರಹಿಕೆಯೊಂದಿಗೆ, ವಸ್ತುನಿಷ್ಠತೆಯ ಪ್ರಮಾಣವು ವ್ಯಾಪಕತೆಯನ್ನು ಪಡೆಯುತ್ತಾ ಹೋಗುತ್ತದೆ. ಮುಕ್ತವಾಗಿ ಹೇಳಬೇಕೆಂದರೆ ಪ್ರಜಾಪ್ರಭುತ್ವವನ್ನು ತಂದುಕೊಟ್ಟಿವೆ.

ವ್ಯಕ್ತಿಗತವಾಗಿ, ಸಾಮೂಹಿಕವಾಗಿ ಹೋರಾಡದೇ ಮಾಧ್ಯಮಗಳಲ್ಲಿಯೇ ಅವರನ್ನು ಭಾಗವಾಗಿ, ತೆಗೆದುಕೊಂಡು ಸಾಹಿತ್ಯ ಸೃಷ್ಟಿಯನ್ನು ಮಾಡುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿಕೊಂಡಿದೆ. ಸಾಮಾಜಿಕ ಮಾಧ್ಯಮದಲ್ಲಿ ಇರುವ ಜನರೇ ಹೊರಗೂ ಇದ್ದಾರೆ ಎಂದರೂ ತಪ್ಪೇನಿಲ್ಲ. ಸಾಹಿತ್ಯದ ಅಭಿವ್ಯಕ್ತಿಯು ಕೇವಲ ಸೀಮಿತವಾದ ಪರಿಕರಗಳನ್ನು ಹೊಂದಿರುವ ಕಾಲವಾಗಿರದೆ, ಇಂದು ಮಾಧ್ಯಮಗಳು ಸಾಹಿತಿಗಳ ವೇದಿಕೆಯಾಗಿದೆ. ಸಾಹಿತ್ಯದ ಬದಲಾವಣೆ ನಿರಂತರವಾಗಿರುವ ಹಿನ್ನಲೆಯಲ್ಲಿ ಅದರ ಮುಂದಿನ ಸಿದ್ಧತಾ ಕಾರ್ಯ ಹೇಗಿರಬೇಕು ಎಂಬುದನ್ನು ತಿಳಿಯಪಡಿಸುವುದೇ ಮಾಧ್ಯಮಗಳು.

ಸಾಹಿತ್ಯ ಲೋಕದಲ್ಲಿರುವ ಏಕಾಗ್ರತೆಯನ್ನು ಒಡೆದು ಹಾಕಿ ಚಿಂತನೆಯ ಬಹುತ್ವವನ್ನು ತಂದುಕೊಟ್ಟಿದೆ. ಮಾಧ್ಯಮಗಳಿಗೆ ಸಾಹಿತ್ಯ ಸೃಷ್ಟೀಕರಣದಲ್ಲಿ ಕೇಂದ್ರ, ಎಲ್ಲೆ, ಅಂಚು, ಪರಿಧಿ, ಗಡಿ ಎನ್ನುವುದು ಇಲ್ಲವಾಗಿದೆ. ಜಡತ್ವವೆನ್ನಿಸಿಕೊಳ್ಳದೆ ಸರಳತೆಯ ರೂಪದಲ್ಲಿ ಸಾಗುತ್ತಿದೆ. ಮುದ್ದಣ "ಪದ್ಯಂ ವದ್ಯಂ ಗದ್ಯಂ ಹೃದ್ಯಂ" ಎನ್ನುವ ಬದಲಾವಣೆ, ವಿ.ಕೃ. ಗೋಕಾಕರ "ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು" ಎನ್ನುವ ಬದಲಾವಣೆ, ಅಡಿಗರ "ನವೋದಯದ ಭಾಷೆ ಗಾಳಿ ಗಾಳಿಯಾಗಿ ಪೊಳ್ಳು ಪೊಳ್ಳುವಿನ ಹಾಗೆ ಇತ್ತು" ಎಂಬ ಮಾತಿನ ಹಿನ್ನಲೆಯಲ್ಲಿ ಜೊಳ್ಳುಗಾಳುಗಳ ಮಧ್ಯೆ ಗಟ್ಟಿಕಾಳುಗಳು ಇದ್ದೇ ಇರುತ್ತವೆ ಎಂಬುದಾಗಿದೆ.

ಕ್ಯಾಸೆಟ್ ಕಾಲದ ಸಂದರ್ಭದಲ್ಲಿ ಕ್ಯಾಸೆಟ್ ಕವಿಗಳು ಎಂದು ಹೆಸರಾದವರು ಅನೇಕರು. ಇಂದು ವಾಟ್ಸಾಪ್, ಫೇಸ್‌ಬುಕ್, ಟೆಲಿಗ್ರಾಮ್, ಬ್ಲಾಗ್‌ಗಳ ಮೂಲಕ ಕವಿಗಳು ಹೆಚ್ಚಾಗಿದ್ದಾರೆ. ಅಲ್ಲದೇ ಕನ್ನಡ ಲೇಖಕರು ತಮ್ಮ ಪುಸ್ತಕಗಳನ್ನು ತಾವೇ ಮುದ್ರಣ ಮಾಡಿಕೊಳ್ಳಬಹುದು ಮತ್ತು ಅವುಗಳ ಜಾಹೀರಾತುಗಳನ್ನು ಮಾಧ್ಯಮಗಳಲ್ಲಿಯೇ ಪ್ರಕಟಿಸಬಹುದು.

ಸಮಾರೋಪವಾಗಿ ಏನೇ ಆದರೂ ಮಾಧ್ಯಮದಲ್ಲಿ ಅವಿತುಕೊಂಡಿರುವ ನಾವು ಪಾರಂಪರಿಕವಾಗಿ ಇದ್ದ ಮಾಧ್ಯಮಗಳನ್ನು ಮರೆಯದೆ, ಅರಿಯದೆ "ನಮ್ಮದೇ ಸಾರ್ವಕಾಲಿಕ" ಎಂಬುದನ್ನು ಅಳಿಸಬೇಕು. ಅಡಿಪಾಯವಿಲ್ಲದೇ ಗೋಪುರ ಸಾಧ್ಯವಿಲ್ಲ ಎಂಬ ನಿಲುವಿಗೆ ಅನುಗುಣವಾಗಿ, ಸಾಹಿತ್ಯದ ಮಾಧ್ಯಮಗಳು ನಾಡು, ನುಡಿ, ಸಂಸ್ಕೃತಿಯನ್ನು ಉಳಿಸುವಲ್ಲಿ, ಬೆಳೆಸುವಲ್ಲಿ, ತಲೆಮಾರಿನ ಶ್ರೀಮಂತಿಕೆಯ

ಸಾಹಿತ್ಯವನ್ನು ಅವಲೋಕಿಸಿ, ಆಸ್ವಾದಿಸಿ, ಸರಿದೂಗಿಸಿ, ವಾಸ್ತವಕ್ಕೆ ಪೋಣಿಸಿ, ಕಂಗೊಳಿಸುವಂತೆ ಮಾಡುವ ಜವಾಬ್ದಾರಿಯು ನಮ್ಮದಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಬುಳ್ಳಣ್ಣವರ ಬಿ.ಎಚ್. ಮತ್ತು ರಮೇಶ ಮ. ಕಲ್ಲನಗೌಡರ, (2022), ಸಮೂಹ ಸಂವಹನ ಮಾಧ್ಯಮ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಸಂಗಮೇಶ ಸವದತ್ತಿಮಠ, (2015), ಕನ್ನಡ ಭಾಷಾ ವ್ಯಾಸಂಗ, ರೂಪರಶ್ಮಿ ಪ್ರಕಾಶನ, ಧಾರವಾಡ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.